# ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ–೨೦೧೯



ಧಾರವಾಡ : 'ಮನಮುಟ್ಟುವ, ಹೃದಯ ತಟ್ಟುವ, ಪರಿಶುದ್ಧವಾದ ಸುಶ್ರಾವ್ಯ ಸಂಗೀತ ಅನೇಕ ಮನೋವ್ಯಾಧಿಗಳನ್ನು ಗುಣಪಡಿಸುವುದು ಇಂದಿನ ಮೊಬೈಲ್ ಮತ್ತು ಕಂಪ್ಯೂಟರಗಳನ್ನು ಅತಿಯಾಗಿ ಬಳಸುವ ನಮ್ಮ ಯುವಕ–ಯುವತಿಯರು ಮನೋಗ್ಲಾನಿಗಳಿಂದ ಬಳಲುತ್ತಿದ್ದಾರೆ. ಹರಿದಾಸರ ಹಾಡುಗಳನ್ನು ಪಾಲಕರು ತಮ್ಮ ಮಕ್ಕಳಿಗೆ ಹೇಳಿಕೊಡುವುದರ ಮೂಲಕ ಸಂಪ್ರದಾಯ, ಸಂಸ್ಕಾರಗಳನ್ನು ಕೊಡುವುದರಿಂದ ಯಾವುದೇ ಮನೋರೋಗಗಳು ಕಾಡಲಾರವು' ಎಂದು ಖ್ಯಾತ ಮನೋವೈದ್ಯ ಡಾ. ಆನಂದ ಪಾಂಡುರಂಗಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರತಿಷ್ಠಾನ, ಧಾರವಾಡದ ಉತ್ತರಾಧಿಮಠ ದತ್ತಿ ಕಾರ್ಯಕ್ರಮ ಅಂಗವಾಗಿ ದಿನಾಂಕ ೨೯–೧–೨೦೧೯ ರಂದು ಆಯೋಜಿಸಿದ್ದ ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ದಾಸ ಸಾಹಿತ್ಯದ ರೂಪಕ ಉದ್ಘಾಟನೆಗೊಳಿಸಿ ಮಾತನಾಡಿದರು.

ಸಾಹಿತಿ ಶ್ರೀನಿವಾಶ ಕುಲಕರ್ಣಿ ಅವರು ಅತಿಥಿಗಳಾಗಿ ಆಗಮಿಸಿ, ಮಾತನಾಡುತ್ತಾ, ಕೇವಲ ಭೌತಿಕತೆಯೇ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಸುಹಾಸಿನಿಯರು ಅಲ್ಲಲ್ಲಿ ಭಜನಾ ಮಂಡಳಿ ರಚಿಸಿಕೊಂಡು ಹರಿದಾಸರ ಹಾಡುಗಳನ್ನು ಪ್ರಚುರಪಡಿಸುವುದರ ಮೂಲಕ ಸಂಪ್ರದಾಯಗಳನ್ನು ಉಳಿಸಿ–ಬೆಳೆಸಿಕೊಂಡು ಹೊರಟಿದುದು ಸಂತೋಷಕರ ಸಂಗತಿ ಎಂದರು.

ಕ.ವಿ.ವ. ಸಂಘದ ಅಧ್ಯಕ್ಷ  ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಬ್ರಾಹ್ಮಣ ಹೆಂಗಳೆಯರು ನೂರಾರು ಸಂಖ್ಯೆಯಲ್ಲಿ ಸಂಘಟಿತರಾಗಿ 'ಸಂಪ್ರದಾಯ–ಸಂಸ್ಕಾರ'ಗಳನ್ನು ಮುಂದುವರೆಸುತ್ತಿರುವುದನ್ನು ಬೇರೆಯವರು ಅವರನ್ನು ಅನುಸರಿಸಬೇಕೆಂದು ಹೇಳಿದರು.

ಧಾರವಾಡದ ಯೋಗಮಿತ್ರ ಮಹಿಳಾ ಮಂಡಳದ ಶ್ರೀಮತಿ ವಿದ್ಯಾ ಶಿರಹಟ್ಟಿ, ಹಾಗೂ ಶ್ರೀಮತಿ ಜಯಶ್ರೀ ಗದಗಕರ ನೇತೃತ್ವದಲ್ಲಿ ಪ್ರಸ್ತುತಪಡಿಸಿದ ಮೇರು ಹರಿದಾಸಿಣಿ 'ಗಲಗಲಿಅವ್ವನವರು' ರೂಪಕವನ್ನು ಪ್ರಸ್ತುಪಡಿಸಿ, ನೆರೆದ ಪ್ರೇಕ್ಷಕರ ಮನ ಗೆಲ್ಲುವಲ್ಲಿ ಯಶಸ್ವಿಯಾದರು.

ಕಾರ್ಯಕ್ರಮದ ಪೂರ್ವದಲ್ಲಿ ಹರಿದಾಸ ಮಹಿಳೆಯರ ಹಾಡುಗಳ ಸ್ಪರ್ಧೆ ಜರುಗಿತು. ಹರಿದಾಸ ಮಹಿಳೆಯರ ಹಾಡುಗಳ ಸ್ಪರ್ಧೆಯಲ್ಲಿ ಶ್ರೀಮತಿ ರೇಖಾ ದೇಶಪಾಂಡೆ ನೇತೃತ್ವದ ತಾರಕೇಶ್ವರಿ ಭಜನಾ ಮಂಡಳಿ ಪ್ರಥಮ ಬಹುಮಾನ ಪಡೆದು 'ಸತ್ಯಪ್ರಮೋದ ಹರಿದಾಸ ಸಾಹಿತ್ಯ ಪ್ರಶಸ್ತಿ–೨೦೧೯ನ್ನು ಪಡೆದುಕೊಂಡರು. ಶ್ರೀಮತಿ ಕಾಂಚನಾ ಕಟ್ಟಿ ನೇತೃತ್ವದ ಓಂಕಾರ ಭಜನಾ ಮಂಡಳಿ ದ್ವಿತೀಯ ಬಹುಮಾನವನ್ನು ಪಡೆದರೆ, ತೃತೀಯ ಬಹುಮಾನವನ್ನು ಶ್ರೀಮತಿ ಸರೋಜಾ ದೇಶಪಾಂಡೆ ನೇತೃತ್ವದ ಸ್ವರ್ಣ ಕಮಲ ಭಜನಾ ಮಂಡಳಿ ಹಾಗೂ ಶ್ರೀಮತಿ ಸುಮಾ ದೇಸಾಯಿ ನೇತೃತ್ವದ ಆರಾಧನಾ ಭಜನಾ ಮಂಡಳಿಯು ಜಂಟಿಯಾಗಿ ಪಡೆದುಕೊಂಡವು

ಇದೇ ಸಂದರ್ಭದಲ್ಲಿ ಪ್ರಮೋದ ಹರಿದಾಸ ಸಾಹಿತ್ಯ ಪ್ರತಿಷ್ಠಾನದ ವತಿಯಿಂದ ಜರುಗುವ ಉತ್ತರಾಧಿಮಠ ದತ್ತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಳೆದ ಸತತ ೧೧ ವರ್ಷಗಳವರೆಗೆ ವಹಿಸಿದ ಶತಾಯುಷಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸತ್ಯಪ್ರಮೋದ ಹರಿದಾಸ ಪ್ರತಿಷ್ಠಾನದ ಅಧ್ಯಕ್ಷರಾದ ಎಸ್.ಬಿ. ಗುತ್ತಲ ದತ್ತಿ ಕುರಿತು ಮಾತನಾಡಿದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ  ಅತಿಥಿಗಳನ್ನು ಪರಿಚಯಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾರಂಭದಲ್ಲಿ ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್.ಬಿ.ಗಾಮನಗಟ್ಟಿ ವಂದಿಸಿದರು.ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಜನೆವರಿ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕ ಸತೀಶ ತುರಮರಿ ಕಾರ್ಯಕ್ರಮ ನಿರೂಪಿಸಿದರು. ಸ್ಪರ್ಧೆಯ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸರೋಜಾರಾವ ಹಾಗೂ ಪ್ರತಿಷ್ಠಾನದ ಸಹ ಕಾರ್ಯದರ್ಶಿ ಹಾಗೂ ದಂತ ಮಹಾವಿದ್ಯಾಲಯದ ಪ್ರಾಧ್ಯಾಪಿಕೆ ಡಾ. ಕೃತಿಕಾ ಗುತ್ತಲ ಬಹುಮಾನ ಹಾಗೂ ಪ್ರಮಾಣ ಪತ್ರ ಭಾಗವಹಿಸಿದವರಿಗೆ ನೀಡಿದರು. ಇನ್ನೋರ್ವ ಅತಿಥಿ ಹಾಗೂ ಸಹ ನಿರ್ಣಾಯಕಿ ಶ್ರೀಮತಿ ಆಶಾ ಪ್ರಳಯಕಲ್ಮಠ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲಿ ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಹಾಗೂ ಎಚ್,ಎನ್. ಕಾರಕೂನ, ಎಲ್.ಐ.ಸಿ.ಯ ಅಧಿಕಾರಿಗಳಾದ ಶ್ರೀಕಾಂತ ಹಂಚಿನಮನಿ, ನಾಡಿಗೇರ, ಶಿರಹಟ್ಟಿ ಹಾಗೂ ದೀಪಕ ಆಲೂರ, ಸಾಹಿತಿ ಶ್ರೀನಿವಾಸ ವಾಡಪ್ಪಿ, ಗಾಯಕ ರಾಜೇಂದ್ರ ದೇಶಪಾಂಡೆ, ಎಚ್.ತಿರುಮಲೇಶ, ಕೇಶವ ಗದಗಕರ, ಶ್ರೀಮತಿ ಅನುರಾಧಾ ಕುಲಕರ್ಣಿ, ಶ್ರೀಮತಿ ಸಂಧ್ಯಾ ಕುಲಕರ್ಣಿ, ಹಿರಿಯ ನ್ಯಾಯವಾದಿ ಶ್ರೀಮತಿ ಸಾವಿತ್ರಿ ಮಹಿಷಿ ಸೇರಿದಂತೆ ಗುತ್ತಲ ಪರಿವಾರದವರು ಉಪಸ್ಥಿತರಿದ್ದರು.

**ಸತೀಶ ತುರಮರಿ**
ಕಾರ್ಯಕಾರಿ ಸಮಿತಿ ಸದಸ್ಯರು